ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 29-6-2017

# ಪತ್ರಿಕಾ ಆಮಂತ್ರಣ

1. ಅಗ್ನಿಶಾಮಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ:

ಮುಖ್ಯ ಅತಿಥಿ:
ಶ್ರೀಮತಿ ನೀಲಮಣಿ ಎನ್. ರಾಜು,
ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.

ಉಪಸ್ಥಿತರು:
ಶ್ರೀ ಸೌಮೇಂದು ಮುಖರ್ಜಿ, ಪೊಲೀಸ್ ಮಹಾ ನಿರೀಕ್ಷಕರು ಹಾಗೂ ಹೆಚ್ಚುವರಿ ಮಹಾ ನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.

ದಿನಾಂಕ: 30-06-2017, ಶುಕ್ರವಾರ, ಸಮಯ : ಬೆಳಿಗ್ಗೆ 8-45 ಗಂಟೆಗೆ.
ಸ್ಥಳ: ಆರ್. ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029.

2. Jawaharlal Nehru Centre for Advanced Scientific Research

2016 Prizes for outstanding Science Teachers.

Dated 30-06-2017 Friday, Time: 10.00 AM.

Place: Madan Mohan Malaviya Amphitheatre, C.N.R. Rao Hall of Science, JNCASR, Jakkur, Bengaluru.

# ಪತ್ರಿಕಾ ಪ್ರಕಟಣೆ

## ಆರ್‌ಟಿಇ ಸಾರ್ವಜನಿಕ ಅಹವಾಲು ವಿಚಾರಣಾ ಕಾರ್ಯಕ್ರಮ

**ಬೆಂಗಳೂರು, ಜೂನ್ 29 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ (ಆರ್‌ಟಿಇ) ಆಡಿಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತದೆ.

ಈ ನಿಟ್ಟಿನಲ್ಲಿ ಈ ಕಾಯಿದೆಯಡಿಯಲ್ಲಿ ಶಾಲಾ ಮಕ್ಕಳಿಗೆ, ಪೋಷಕರಿಗೆ ಹಾಗೂ ಸಾರ್ವಜನಿಕರಲ್ಲಿ ಯಾವುದೇ ದೂರುಗಳಿದ್ದಲ್ಲಿ ಅವುಗಳ ವಿಚಾರಣೆಗಾಗಿ ಬೆಂಗಳೂರಿನಲ್ಲಿ ಸಾರ್ವಜನಿಕ ಅಹವಾಲನ್ನು ಆಯೋಜಿಸಿರುತ್ತದೆ.

ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಗಳಿಂದ  ಕಾಯಿದೆಯಡಿಯಲ್ಲಿ ಮಕ್ಕಳು, ಪೋಷಕರು ಹಾಗೂ ಸಾರ್ವಜನಿಕರಲ್ಲಿ ಯಾವುದೇ ರೀತಿಯ ದೂರುಗಳಿದ್ದಲ್ಲಿ ನೇರವಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ, ಕೃಷಿ ಭವನ, ಹಡ್ಸನ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು – 560 001 ಈ ವಿಳಾಸದಲ್ಲಾಗಲೀ ಅಥವಾ ಇಮೇಲ್ ವಿಳಾಸ kscpcr@gmail.com ಮೂಲಕ ಕಳುಹಿಸಬಹುದಾಗಿದೆ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷೆ ಡಾ: ಕೃಪಾ ಅಮರ್‌ಆಳ್ವ ತಿಳಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ಜಲಾನಯನ ಅಭಿವೃದ್ಧಿ ಇಲಾಖೆಗೆ
## ಪ್ರತಿಷ್ಠಿತ ಸ್ಕೋಚ್ ರಾಷ್ಟ್ರೀಯ ಪ್ರಶಸ್ತಿ

**ಬೆಂಗಳೂರು, ಜೂನ್ 29 (ಕರ್ನಾಟಕ ವಾರ್ತೆ)**

ಜಲಾನಯನ ಅಭಿವೃದ್ಧಿ ಇಲಾಖೆಯು ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ–2 (ಸುಜಲ–3) ನ್ನು, ರಾಜ್ಯದ 11 ಜಿಲ್ಲೆಗಳಲ್ಲಿ 2013 ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಲ್ಲಿ ಅತ್ಯಾಧುನಿಕ ಹಾಗೂ ವೈಜ್ಞಾನಿಕ ಸಿದ್ಧಾಂತಗಳನ್ನು ಅಳವಡಿಸಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ತಂತ್ರಗಳನ್ನು ಬಳಕೆ ಮಾಡಿರುವುದನ್ನು ಪರಿಗಣಿಸಿ, ಮುಂಬೈನ ಪ್ರತಿಷ್ಠಿತ ಸ್ಕೋಚ್ ಆರ್ಡರ್–ಆಫ್–ಮೆರಿಟ್ ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು, ಕರ್ನಾಟಕ ರಾಜ್ಯ ಜಲಾನಯನ ಅಭಿವೃದ್ಧಿ ಇಲಾಖೆಯು ಪಡೆದುಕೊಂಡಿದೆ.

ಈ ಪ್ರಶಸ್ತಿಯನ್ನು ಮುಂಬೈನಲ್ಲಿರುವ ಷೇರು ವಿನಿಮಯ (ಬಾಂಬೆ ಸ್ಟಾಕ್ ಎಕ್ಸಚೇಂಜ್) ಅಂತರರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ಸ್ಕೋಚ್ ಸಂಸ್ಥೆಯ ಅಧ್ಯಕ್ಷರಾದ ಸಮೀರ್ ಕೊಚ್ಚರ್ ರವರು ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ರಾಜೀವ್ ರಂಜನ್ ಹಾಗೂ ಸುಜಲ-3 ಯೋಜನೆಯ ಕಾರ್ಯಕಾರಿ ನಿರ್ದೇಶಕರಾದ ಡಾ. ಸೂರ್ಯದೇವ್ ಪಾಠಕ್ ಅವರಿಗೆ ಇತ್ತಿಚೆಗೆ ಪ್ರದಾನ ಮಾಡಿದರು ಎಂದು ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಮಾವು ಬೆಳೆಗೆ ಹಣ್ಣಿನ ನೊಣದ ಹಾವಳಿ: ಮುಂಜಾಗತಾ ಕ್ರಮಕ್ಕೆ ಸಲಹೆ

**ಬೆಂಗಳೂರು, ಜೂನ್ 29 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯದಲ್ಲಿ ಮಾವಿನ ಬೆಳೆಯನ್ನು 1.73 ಲಕ್ಷ ಹೆಕ್ಟೇರ್ ಗಳಲ್ಲಿ ಬೆಳೆಯಲಾಗುತ್ತಿದೆ. ಕೋಲಾರ ಜಿಲ್ಲೆಯು ವಿಸ್ತೀರ್ಣ ಮತ್ತು ಉತ್ಪಾದನೆಯಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಶೇ. 60% ಕ್ಕೂ ಹೆಚ್ಚು ಪ್ರದೇಶದಲ್ಲಿ ತೋತಾಪುರಿ ಮತ್ತು ನೀಲಂ ತಳಿಗಳನ್ನು ಬೆಳೆಯಲಾಗುತ್ತಿದೆ.

ಬರಗಾಲ ಮತ್ತು ಅಕಾಲಿಕ ಮಳೆಯಿಂದಾಗಿ 2016-17 ಸಾಲಿನಲ್ಲಿ ಮಾವಿನ ಮರಗಳಲ್ಲಿ ವಿವಿಧ ಹಂತಗಳಲ್ಲಿ ಫಸಲು ಕಚ್ಚಿದ್ದು, ಪ್ರಾರಂಭಿಕವಾಗಿ ಬಂದ ಬೆಳೆ ಮತ್ತು ಫಸಲು ಚೆನ್ನಾಗಿದ್ದು ಶೇ. 60% ರಷ್ಟು ಫಸಲು ಈಗಾಗಲೇ ಕಟಾವು ಆಗಿರುತ್ತದೆ ಹಾಗೂ ಶೇ. 25% ಫಸಲು ಇನ್ನು ಕಟಾವಾಗಬೇಕಿದ್ದು, ರಾಜ್ಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ಹಣ್ಣಿನ ನೊಣದ ಹಾವಳಿ ಹೆಚ್ಚಾಗಿ ಫಸಲು ಹಾಳಾಗುತ್ತಿದೆ. ಮತ್ತು ಈ ಕುರಿತು ಎಲ್ಲಾ ಮಾವು ಬೆಳೆಗಾರರು ಎಚ್ಚರಿಕೆ ವಹಿಸಬೇಕಾಗಿರುತ್ತದೆ. ಹಣ್ಣಿನ ನೊಣದ ಹಾವಳಿಯನ್ನು ತಡೆಗಟ್ಟಲು ಮೋಹಕ ಬಲೆಗಳನ್ನು ಬಳಸುವ ಮತ್ತು ಅವುಗಳ ಉಪಯೋಗದ ಬಗ್ಗೆ ಮಾವು ನಿಗಮದಿಂದ ತರಬೇತಿ ವಿಚಾರ ಸಂಕಿರಣ ಮತ್ತು ಪಾತ್ಯಕ್ಷೆತಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಹಾಗೂ ಮೋಹಕ ಬಲೆಗಳನ್ನು ಬಳಕೆ ಉತ್ತೇಜಿಸಲು ಕೇವಲ ರೂ. 10/- ಗಳ ರೈತರ ವಂತಿಗೆ ಮತ್ತು ರೂ. 34/- ಗಳ ನಿಗಮದ ಸಹಾಯಧನದಲ್ಲಿ 1 ಟ್ರ್ಯಾಪ್ ಮತ್ತು 3 ಲೂರ್ಸ್‌ಗಳನ್ನು ಖರೀದಿಸಲು ಸರಬರಾಜುದಾರರನ್ನು ಗುರುತಿಸಿದ್ದು, ಮಾಡಿಕೆರೆ ಮತ್ತು ಹೊಗಳಗೆರೆ ಮಾವು ಅಭಿವೃದ್ಧಿ ಕೇಂದ್ರಗಳ ಹಾಗೂ ಇಲಾಖೆ ರಚಿಸಿರುವ ಎಫ್.ಪಿ.ಓ ಗಳ ಮೂಲಕ ಮಾವು ಬೆಳೆಗಾರರಿಗೆ ಒದಗಿಸಲಾಗಿತ್ತು. ಹಣ್ಣಿನ ನೊಣದ ಮೋಹಕ ಬಲೆಗಳನ್ನು ಒಂದು ಪ್ರದೇಶದಲ್ಲಿರುವ ಎಲ್ಲಾ

ಮಾವು ಬೆಳೆಗಾರರು ಒಟ್ಟಿಗೆ ಕಟ್ಟಿದಾಗ ಮಾತ್ರ ಹಣ್ಣಿನ ನೊಣದ ಹಾವಳಿಯನ್ನು ನಿಯಂತ್ರಿಸಬಹುದಾಗಿದ್ದು, ಎಲ್ಲಾ ತೋತಾಪುರಿ ಮತ್ತು ನೀಲಂ ತಳಿಗಳ ಬೆಳೆಗಾರರು ತಪ್ಪದೇ ಮೋಹಕ ಬಲೆಗಳನ್ನು ಕಟ್ಟಿ ಉಳಿದಿರುವ ಮಾವಿನ ಫಸಲನ್ನು ಉಳಿಸಿಕೊಳ್ಳಲು ಕ್ರಮವಹಿಸಬೇಕೆಂದು ಮಾವು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮನವಿ ಮಾಡಿರುತ್ತಾರೆ.